ಶ್ರೀ ಎನ್. ಎಂ. ಅಡ್ಯಂತಾಯ. —ಈ ರೀತಿ ಉತ್ತರ ಕೊಟ್ಟರೆ ನಾವು ಇದರ ಮೇಲೆ ಅರ್ಧ ಗಂಟೆ ಕಾಲದ ಚರ್ಚೆಗೆ ಬರೆದಂಕೊಡಬೇಕಾಗುತ್ತದೆ.

ಅಧ್ಯಕ್ಷರು.—ನೀವು ಬರೆದುಕೊಡಿ. ಶ್ರೀ ಯಡಿಯೂರಪ್ಪನವರ ಪ್ರಶ್ನೆಗೆ ಮಂತ್ರಿ ಶ್ರೀ ಲಕ್ಕಪ್ಪ ನವರ ಪ್ರಶ್ನೆಗೆ ಉತ್ತರ ಕೊಡಲು ಸಮಯ ಬೇಕೆಂದು ಸರ್ಕಾರದವರು ಕೇಳಿಕೊಂಡಿದ್ದಾರೆ. ಆದ್ದರಿಂದ ಈ ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ. ಈಗ ಮಾನ್ಯ ಬಸವಲಿಂಗಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಿರುವ ಬಗ್ಗೆ.

೧೩೪೪. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಾರ್ತಾ ಪ್ರಸಾರೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೬ ರಿಂದೀಚೆಗೆ ನಿರ್ಮಾಣ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು ?

(ಅಳತೆವಾರು ವಿವರಗಳನ್ನು ಒದಗಿಸುವುದು)

ಆ) ಈ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು ?

(ಅಳತೆವಾರು ನಿವೇಶನಗಳ ವಿವರಗಳನ್ನು ಒದಗಿಸುವುದು)

ಇ) ೧೯೮೩ರ ಮೊದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನ ಬೆಲೆಯನ್ನು ಆರು ಕಂತಿಂಗಳಲ್ಲಿ ಪಾವತಿ ಮಾಡುವ ಬಗ್ಗೆ ರಿಯಾಯಿತಿ ನೀಡಿ ಹೊರಡಿಸಿದ ಸರ್ಕಾರಿ ಆಜ್ಞೆಯನ್ನು ೧೯೮೩ರ ನಂತರವೂ ಅನುಸರಿಸಲಾಗುತ್ತಿದೆಯೇ ?

ಶ್ರೀ ಎ. ಪಿ. ಪ್ರಕಾಶ್.—(ವಾರ್ತಾ ಪ್ರಸಾರೋದ್ಯಮ ಮತ್ತು ಸಂಸ್ಕೃತಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು). —

ಅ) ೧೯೮೬ ರಿಂದೀಚೆಗೆ ೧೭,೦೧೬ ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ.

(ಅಳತೆವಾರು ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.)

ಆ) ೪,೪೧೬ ನಿವೇಶನಗಳು.

(ಪಟ್ಟಿ ಲಗತ್ತಿಸಲಾಗಿದೆ)

ಇ) ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ೪೪೧೬ ನಿವೇಶನಗಳು ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಅಳತೆವಾರು ನಿವೇಶನಗಳ ವಿವರಗಳನ್ನು ಇಲ್ಲಿ ಒದಗಿಸಿದ್ದಾರೆ. ಇದರಲ್ಲಿ ಇಪ್ಪತ್ತು ಅಡಿ ಮತ್ತು ೩೦ ಅಡಿ ಅಳತೆಯ ೨೨೮೪ ಸೈಟ್‌ಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಈ ಅಳತೆಯ ಸೈಟ್‌ಗಳನ್ನು ಲಿಂಗರಾಜಪುರದ ಕೆರೆಯ ಮೈದಾನದಲ್ಲಿ ನಿರ್ಮಿಸಿದ್ದಾರೆ. ಇದರ ಜೊತೆಗೆ ಇನ್ನಿತರ ಅಳತೆಗಳುಳ್ಳ ಸೈಟ್‌ಗಳನ್ನು ಸಹ ನಿರ್ಮಿಸಿ ಪರಿಶಿಷ್ಟ ಜಾತಿಯವರಿಗೆ ಹಂಚಿಕೆ ಮಾಡಿದ್ದೇವೆಂದು ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರುವ ವಿವರಗಳನ್ನು ನೋಡಿದಾಗ ಪರಿಶಿಷ್ಟ ಜಾತಿಯವರಿಗೆ ವಿಂಗಡಿಸಲಾತಿ ಪ್ರಕಾರ ಎಷ್ಟು ಸೈಟ್‌ಗಳನ್ನು ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಂತೆ ಕಾಣುವುದಿಲ್ಲ. ತಾವು ಯೋಚನೆ ಮಾಡಿ. ಈಗ ನೀವು ಯಾವ ಯಾವ ಡೈಮನ್‌ಷನ್ ಸೈಟುಗಳನ್ನು ಕೊಟ್ಟಿದ್ದೀರಿ ಎಂದು ಪಟ್ಟಿಯಲ್ಲಿ ನೋಡಿ. ೬೦x೯೦ ಅಡಿ ಅಳತೆಯ ಸೈಟನ್ನು ಒಬ್ಬರಿಗೆ ಕೊಟ್ಟಿದ್ದೀರಿ. ಆ ಮಹಾನುಭಾವರು ಯಾರೋ ಗೊತ್ತಿಲ್ಲ. ಬೇರೆಯವರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಅಂದರೆ ೫೦x೮೦ ಅಡಿ ಅಳತೆಯ ಸೈಟುಗಳನ್ನು ೮೫

ಜನರಿಗೆ ಕೊಟ್ಟಿದ್ದೀರಿ. ೪೦×೬೫ ಅಡಿ ಅಳತೆಯ ಸೈಟುಗಳನ್ನು ೩ ಜನರಿಗೆ ಕೊಟ್ಟಿದ್ದೀರಿ. ೬೦×೯೮ ಅಡಿ ಅಳತೆಯ ಸೈಟನ್ನು ಒಬ್ಬರಿಗೆ ಕೊಟ್ಟಿದ್ದೀರಿ ೪೦×೬೦ ಅಡಿ ಅಳತೆಯ ಸೈಟುಗಳನ್ನು ೫೩೫ ಜನರಿಗೆ ಕೊಟ್ಟಿದ್ದೀರಿ. ಈ ವಿವರವನ್ನು ಕೊಟ್ಟಿದ್ದೀರಿ, ನಾನು ತಮಗೆ ಪ್ರಶ್ನೆ ಕೇಳುತ್ತಾ ಇದ್ದೇನೆ. ಯಾವ ಯಾವ ಡೈಮೆನ್ಷನ್‌ನಲ್ಲಿ ಎಷ್ಟು ಸೈಟುಗಳನ್ನು ಮಾಡುತ್ತಿದ್ದೀರಿ ಆ ಎಲ್ಲಾ ಸೈಟುಗಳನ್ನೂ ಕೂಡ ಕೊಂಡುಕೊಳ್ಳುವ ಶಕ್ತಿ ಇರುವವರಿಗೆ ಮೀಸಲಾತಿ ಪ್ರಕಾರಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಎರಡನೆಯ ಪ್ರಶ್ನೆ ಏನೆಂದರೆ ಬಿ.ಡಿ.ಎ. ಒಂದು ಪ್ರಾಧಿಕಾರ ಇದೆ. ಇದರಲ್ಲಿ ಸೈಟ್ಸ್ ಮಾಡತಕ್ಕಂಥಾದ್ದು ಒಂದೇ ಅಲ್ಲ ಮನೆಗಳನ್ನು ಕಟ್ಟತಕ್ಕ ವಿಷಯ ಕೂಡ ಇದೆ. ನೂರಾರು ಮನೆಗಳನ್ನು ಕಟ್ಟಿಬಿಟ್ಟು ಅದರಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಮೀಸಲಾತಿ ಪ್ರಕಾರ ಆ ಮನೆಗಳನ್ನು ಕೊಡದೇ ಹೋದರೆ ಮೀಸಲಾತಿ ಪಾಲಿಸಿ ನೀತಿ ಏನಿದೆ ಅದಕ್ಕೆ ತದ್ವಿರುದ್ಧವಾಗಿ ಹೋದಂತಾಗುವುದಿಲ್ಲವೇ? ಮೂರನೆಯ ಪ್ರಶ್ನೆ ಏನೆಂದರೆ, ನಾನು ನಿಮ್ಮ ಹಾಗೆ ಮಂತ್ರಿಯಾಗಿದ್ದಾಗ ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಸೈಟ್ಸ್‌ನ್ನು ಮಾಡುತ್ತಿದ್ದರು ಯಾರುಯಾರು ಷೆಡ್ಯೂಲ್‌ಕ್ಯಾಸ್ಟ್, ಷೆಡ್ಯೂಲ್‌ಟ್ರೈಬ್ಸ್‌ನಲ್ಲಿ ಬಡವರು ಏನಿದ್ದಾರೆ ಅಂತಹವರಿಗೆ, ಮೊದಲು ಸೈಟ್ಸ್ ಎಲ್ಲಾ ಮಾಡಿದ ಮೇಲೆ ಇವರು ಆರ್ಥಿಕ ಒಂದು ಭಾಗ ಮುಂಗಡ ಹಣ ಕಟ್ಟಬೇಕು ನಂತರ ಕಂತ್ಸು ರೂಪದಲ್ಲಿ ಹಣ ಕಟ್ಟಬೇಕು ಎಂದು ಸರ್ಕಾರದ ಆಜ್ಞೆ ಇದೆ. ಅದರ ಪ್ರಕಾರ ಬೆಂಗಳೂರು ಸಿಟಿಯಲ್ಲಿ, ಮೈಸೂರು ಸಿಟಿಯಲ್ಲಿ ಹಲವಾರು ಜನ ಬಡವರಿಗೆ ಸೈಟು ಸಿಗತಕ್ಕ ವ್ಯವಸ್ಥೆಯಾಯಿತು. ಆದರೆ ೧೯೮೩ನೇ ಇಸವಿ ನಂತರ ಆ ಪಾಲಿಸಿಯನ್ನು ಕೈಬಿಟ್ಟಿದ್ದೀರಿ. ಇದರಿಂದ ೮೦ ಸಾವಿರ ೯೦ ಸಾವಿರಕ್ಕೆ ಸೈಟು ತೆಗೆದುಕೊಳ್ಳತಕ್ಕ ಬೇರೆಯವರ ಜೊತೆ ಕಾಂಪಿಟೇಟ್ ಮಾಡುವುದರಿಂದ ಇವರಿಗೆ ಸೈಟ್ಸ್ ಸಿಗತಕ್ಕ ಅವಕಾಶ ಇದೆಯೋ ಇಲ್ಲವೋ ಎಂದು ಯೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಶ್ರೀಪೂನ್ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದಂತೆ ಮೇಲು ನೋಟಕ್ಕೆ ನಿವೇಶನಗಳು ಇಷ್ಟ ಇದ್ದರೂ ಶೇಕಡ ೨೫ ರಷ್ಟಾಗುತ್ತದೆ. ಮೀಸಲಾತಿ ಪ್ರಕಾರ ೧೮ ಪರ್ಸೆಂಟ್ ಕೊಡಬೇಕು ಎಂದು ಇದ್ದರೂ ಕೂಡ ಕಳೆದ ನಿವೇಶನಗಳನ್ನು ೧೭ ಸಾವಿರಕ್ಕೆ ಹೋಲಿಸಿದಾಗ ಶೇಕಡ ೨೫ ರಷ್ಟು ಬರುತ್ತದೆ.

Statement showing the number of sites formed dimension wise since 1986

20' × 30'	25' × 30'	25' × 40'	30' × 40'	30' × 50'	40' × 45'	40' × 60'	40' × 65'	50' × 80'	60' × 90'	Total
1	2	3	4	5	6	7	8	9	10	11
4,953	154	039	7,007	80	05	4,106	022	043	007	17,016

Statement showing the number of sites allotted to Scheduled Caste and Scheduled Tribes dimension wise since 1986.

Dimension	No. of sites allotted	
	Scheduled Caste	Scheduled Tribe
20' × 30	2,284	199
25' × 30'	23	4
25' × 40'	6	1
30' × 40'	911	210
30' × 45'	4	—
30' × 50'	11	1
40' × 45'	1	—
40' × 60'	534	123
40' × 65'	3	—
50' × 80	85	19
60' × 90'	1	—
	3,859	557

ಶ್ರೀ ಬಿ. ಬಸವಲಿಂಗಪ್ಪ,—ಕರೆಯಲ್ಲಿ ಸೈಟುಗಳನ್ನು ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇಲ್ಲಿಂದ ಅಂದರೆ ರೈಲ್ವೆಸ್ಟೇಷನ್ ಮುಂಭಾಗದ ಸ್ಲಂನಲ್ಲಿದ್ದ ಜನಗಳನ್ನು ಓಡಿಸಿದರು. ಲಿಂಗರಾಜಪುರದ ಕರೆಯಲ್ಲಿ ಸೈಟ್ ಮಾಡಿ ಕೊಟ್ಟಿದ್ದಾರೆ. ಅದಕ್ಕೆ ಹೋಲಿಸಬೇಡಿ. ಉಳಿದಿದ್ದನ್ನು ಯೋಚನೆ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—ಈಗ ನಾನು ಆ ಪ್ರಶ್ನೆಗೂ ಉತ್ತರ ಕೊಡುವ ಪ್ರಯತ್ನ ಮಾಡುತ್ತೇನೆ. ಇದು ಶೇಕಡ ೨೫ ರಷ್ಟಾಗುತ್ತದೆ. ನಮ್ಮ ಸರ್ಕಾರ ಬಂದ ಮೇಲೆ ಡಾ. ಅಂಬೇಡ್ಕರ್ ದಿನೋತ್ಸವಕ್ಕೆ ಸಂಬಂಧಪಟ್ಟಂತೆ ೨ ಸಾವಿರ ನಿವೇಶನಗಳನ್ನು ಅದರ ಮೌಲಿಕ ಬೆಲೆ ೨೫ ರಷ್ಟು ಬರಂತ್ತದೆ, ಆ ಪ್ರಮಾಣದಲ್ಲಿ ನಿವೇಶನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡಬೇಕೆಂಬ ನೀತಿ ಪ್ರಕಾರ ೨ ಸಾವಿರ ನಿವೇಶನಗಳನ್ನು ಕೊಟ್ಟಿದ್ದೇವೆ. ಲಿಂಗರಾಜಪುರದ ನಿವೇಶನಗಳು ಇರಲಿ ಏನೇ ಇರಲಿ, ಇವುಗಳ ಆಳತೆಗಳನ್ನು ಲೆಕ್ಕಹಾಕಿದಾಗ ಅನೇಕ ಸಂದರ್ಭಗಳಲ್ಲಿ ೨೦ × ೩೦ ಆಳತೆಯ ಸೈಟುಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿ ಹೆಚ್ಚಿನ ಆಳತೆಯ ನಿವೇಶನಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಿಕ್ಕಿಲ್ಲ ಎನ್ನುತಕ್ಕ ಮಾತು ಏನಿದೆ ಇದು ಮೇಲು ನೋಟಕ್ಕೆ ಕಂಡುಬರುತ್ತದೆ. ಇದರಲ್ಲಿ ಬೇರೆ ವಿವರಗಳು ಇರಬಹುದು. ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ಹಣವನ್ನು ಕಟ್ಟಲಿಕ್ಕೆ ಸಾಧ್ಯವಾಗಲಾರದಂಥ ಆರ್ಥಿಕವಾಗಿ ದುರ್ಬಲವಾಗಿರುವವರು ೫೦ × ೮೦ ಅಡಿಗಳ ಆಳತೆಯ ನಿವೇಶನವನ್ನು ಪಡೆಯಲಿಕ್ಕೆ ಆಗದೇ ಇರಬಹುದು. ನಿವೇಶನಗಳು ಶೇಕಡಾವಾರು ಬರಬೇಕು. ಕೇವಲ ೨೦ × ೩೦ ಅಳತೆ ನಿವೇಶನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಟ್ಟು ಉಳಿದಿರತಕ್ಕದ್ದನ್ನು ಬೇರೆಯವರಿಗೆ ಕೊಟ್ಟಿದ್ದರೆ ಅದರ ವಿವರಗಳನ್ನು ಆಯುಕ್ತರ ಮೂಲಕ ತೆಗೆದುಕೊಂಡು ಅನ್ಯಾಯವಾದಂಥ ಪ್ರಕರಣಗಳಿದ್ದರೆ ಕೂಡಲೇ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆರ್ಥಿಕವಾಗಿ ದುರ್ಬಲರಾಗಿರತಕ್ಕವರು ೫೦ × ೮೦ ಅಳತೆಯ ನಿವೇಶನಗಳಿಗೆ ಅರ್ಜಿಗಳನ್ನು ಹಾಕಲಾರದೇ ಇದ್ದರೆ ಗುಣಾತ್ಮಕವಾಗಿ ಪರೀಕ್ಷೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಆರ್ಥಿಕವಾಗಿ ದುರ್ಬಲರಾಗಿರತಕ್ಕವರು ೬ ವರ್ಷ ವಾರ್ಷಿಕ ಕಂತುಗಳಲ್ಲಿ ಕಟ್ಟಬಹುದು ಎಂಬ ನಿಯಮವಿತ್ತು, ಇದನ್ನು ನೀವು ಕೈಬಿಟ್ಟಿದ್ದೀರಿ ಎಂದು ಹೇಳಿದ್ದಾರೆ. ಅದು ಸಮಂಜಸವಲ್ಲ. ದಿನಾಂಕ ೧೨-೮-೮೪ಳಲ್ಲಿ ಮತ್ತೊಂದು ಆಜ್ಞೆ ಹೊರಡಿಸಿ ೩ ವರ್ಷದಲ್ಲಿ ಕಂತನ್ನು ಕಟ್ಟಬೇಕು ಎಂದು ಆಜ್ಞೆಯಾಗಿದೆ. ೬ ವರ್ಷಗಳಲ್ಲಿ ಕಂತನ್ನು ಕಟ್ಟುತಕ್ಕ ನಿರ್ಧಾರ ಏನಿತ್ತು ಅದು ಸಮರ್ಪಕವಾದ ನಿರ್ಧಾರವಾದರೂ ಕೂಡ ಆರ್ಥಿಕವಾಗಿ ದುರ್ಬಲರಾಗಿರತಕ್ಕವರ ವಾರ್ಷಿಕ ವರಮಾನ ೫ ಸಾವಿರಕ್ಕಿಂತ ಕಡಿಮೆ ಇರತಕ್ಕವರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರತಕ್ಕವರು ಅವರು ಕೊಡಬೇಕಾಗಿರುವ ಹಣವನ್ನು ೬ ವರ್ಷಗಳ ಕಂತುಗಳಲ್ಲಿ ಕಟ್ಟುತ್ತಿದ್ದರು. ಆದರೆ ಇದು ಮೂರು ವರ್ಷಕ್ಕೆ ಆಗುವುದಕ್ಕೆ ಕಾರಣ ಏನೆಂದರೆ ಅನೇಕ ಸಂದರ್ಭಗಳಲ್ಲಿ ನಿವೇಶನಕ್ಕೆ ಸಂಪೂರ್ಣವಾದ ಹಣವನ್ನು ಕೊಡದೇ ಇದ್ದರೆ ಕೊಡುವುದಕ್ಕಾಗುವುದಿಲ್ಲ. ಸಂಪೂರ್ಣವಾದ ಹಣವನ್ನು ಕೊಡದೇ ಹೋದರೆ ಆ ನಿವೇಶನದ ಸ್ವಾಧೀನವನ್ನು ಕೊಡುವುದಕ್ಕಾಗುವುದಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ದುರ್ಬಲವರ್ಗದವರಿಗೆ ೬ ವರ್ಷಗಳಿಗೆ ಹಣ ಕಟ್ಟುವ ಅವಕಾಶ ಇದೆ ಎಂದು ಹೇಳಿ ಆ ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದೇ ಇರುವಾಗ ಬೇರೆಯವರು ಒತ್ತುವರಿಯನ್ನು ಮಾಡಿಕೊಂಡಿರಬಹುದು. ಅಥವಾ ಇನ್ನೇತರೇ ಅನಧಿಕೃತ ಕಟ್ಟಡ ನಿರ್ಮಾಣವಾಗಿರಬಹುದೆಂದು ಬಂದ ಮನವಿಗಳನ್ನು ಪರಿಗಣಿಸಿ ೧೨-೮-೮೪ರಲ್ಲಿ ಮತ್ತೊಂದು ಆಜ್ಞೆಯನ್ನು ೩ ವರ್ಷಗಳ ಕಂತಿಗೆ ಇಪ್ಪರುಗಳ ಹಿತದೃಷ್ಟಿಯಿಂದಲೇ ಕೊಟ್ಟಿದ್ದೇವೆ. ಇವರ ಹಿತದೃಷ್ಟಿಯಿಂದಲೇ ಈ ಆಜ್ಞೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ೧೭,೦೧೬ ಸೈಟ್‌ಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದು ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸುಮಾರು ೪೪೦೦ ಸೈಟ್‌ಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಈ ೪೪೦೦ ಜನರಲ್ಲಿ ಎಷ್ಟು ಜನರಿಗೆ ಪೊಸೆಷನ್ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದೀರಿ ? ಎಷ್ಟೋ ಜನರಿಗೆ ಅಲಾಟ್‌ಮೆಂಟ್ ಆಗಿದ್ದು ಅವರಿಗೆ ಪಿ. ಸಿ. ಸಿಕ್ಕಿಲ್ಲವೆಂದು ನಮ್ಮಲ್ಲಿ ಬಂದು ಕೆಲವರು ದೂರು ಕೊಟ್ಟಿದ್ದಾರೆ. ಮತ್ತೆ ಅಲಾಟ್‌ಮೆಂಟ್ ಪ್ರಕಾರ ಅಲ್ಲಿ ಸೈಟುಗಳೇ ಇಲ್ಲ ಎಂದು ಹೇಳಿದ್ದಾರೆ. ಎರಡನೆಯದಾಗಿ ಹೌಸಿಂಗ್ ಬೋರ್ಡ್‌ನವರು ಏನು ಮಾಡುತ್ತಾರೆಂದರೆ ಲೇಸ್ ಬೇಸಿಕ್‌ನಲ್ಲಿ ಕೊಟ್ಟು ಅವರು ಪೊಸಿಷನ್ ಕೊಡುತ್ತಾರೆ. ಆ ನಂತರ ೨೦-೨೫ ವರ್ಷಗಳ ನಂತರ ಫೈನಲ್ ಇನ್‌ಸ್ಟಾಲ್‌ಮೆಂಟ್ ಆದಮೇಲೆ ಓನರ್‌ಶಿಪ್ ಕೊಡುತ್ತಾರೆ. ಈಗ

ಅವರಿಗೆ ಸೈಟ್ ಪೊಸಿಷನ್ ಕೊಟ್ಟು ೬ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಹಣ ಪಡೆಯಬಹುದು. You can amend the rules. After all it is an Executive Order. Your own rules. You can do it. ಅವರಿಗೆ ಸಹಾಯ ಮಾಡಬೇಕು ಎಂದರೆ ಮೊದಲು ಪೊಸಿಷನ್ ಕೊಟ್ಟು, ಆರನೇ ಒಂದು ಅಥವಾ ಐದನೇ ಒಂದು ಭಾಗದ ಹಣವನ್ನು ಪಡೆದು ೫-೧೦ ವರ್ಷಗಳು ಆದಮೇಲೆ ಅಥವಾ ನಿಮ್ಮ ರೂಲ್ಸ್ ಪ್ರಕಾರ ೧೦ ವರ್ಷಗಳಾದಮೇಲೆ ಟೈಟಲ್ ಡೀಡ್ ಕೊಡುವುದು ಇದ್ದೇ ಇದೆ. ಇದನ್ನು ನೀವು ಏಕೆ ಮಾಡಬಾರದು ? ಇವತ್ತು ಪೊಸಿಷನ್ ಸರ್ಟಿಫಿಕೇಟನ್ನು ಎಷ್ಟು ಜನರಿಗೆ ಕೊಟ್ಟಿದ್ದೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮೂಲ ಪ್ರಶ್ನೆ ಎಷ್ಟು ಜನರಿಗೆ ಸ್ವಾಧೀನ ಪತ್ರವನ್ನು ಕೊಡಲಾಗಿದೆ ಎನ್ನುವ ವಿವರವನ್ನು ಕೇಳಿದ್ದೀರಿ. ಆ ಪ್ರಶ್ನೆ ಈ ಪ್ರಶ್ನೆಗೆ ಅಡಕವಾಗದೇ ಇರುವುದರಿಂದ ಆ ಉತ್ತರವನ್ನು ಇಲ್ಲಿ ಕೊಡಲು ಸಾಧ್ಯವಾಗದಿರುವುದರಿಂದ ಆ ಬಗ್ಗೆ ನಾನು ಬರೆದು ಕಳುಹಿಸಿಕೊಡುತ್ತೇನೆ. ಇನ್ನು ಹಕ್ಕುಪತ್ರ ಕೊಡುವ ಬಗ್ಗೆ ಹೇಳಬೇಕೆಂದರೆ, ಯಾರು ಸಂಪೂರ್ಣವಾಗಿ ನಿವೇಶನದ ಜಿಲೆ ಕಟ್ಟಿರುತ್ತಾರೋ ಅವರಿಗೆ ಸ್ವಾಧೀನ ಕೊಡುವ ಪರಿಪಾಠ ಇರುವುದರಿಂದ ಅವರಿಗೆ ಅದು ದೊರಕದಿದ್ದರೆ ಅವರು ಹಣವನ್ನು ಕೊಡದೇ ಇರುವುದೂ ಕಾರಣವಾಗಿದೆ. ಮತ್ತೆ ನಿಯಮಾವಳಿಗಳ ಪ್ರಕಾರ ೬ ವರ್ಷಗಳ ಕಾಲದಲ್ಲಿ ಅವರು ಕಂತು ಕಟ್ಟಿ ಸ್ವಾಧೀನಕ್ಕೆ ಕೊಡುವ ಸಂದರ್ಭದಲ್ಲಿ ಬೇರೆಯವರು ಅಲ್ಲಿ ಅಕ್ರಮ ಮಾಡಿರಬಹುದು. ಆದ್ದರಿಂದ ಮೊದಲೇ ಇವರಿಗೆ ಹಕ್ಕು ಪತ್ರವನ್ನು ಏಕೆ ಕೊಟ್ಟು ಸಹಾಯ ಮಾಡಬಾರದು ಎಂದು ಹೇಳಿದ್ದಾರೆ. ಇದು ಒಂದು ಯೋಗ್ಯ ಸಲಹೆ ಇದೆ. ಅದನ್ನು ಈ ಬಗ್ಗೆ ಮಾಡಬಹುದಾಗಿದೆ. ಇವರಿಗೆ ಸಹಾಯ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಆ ಕಾರಣಕ್ಕಾಗಿಯೇ ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ೨ ಸಾವಿರ ನಿವೇಶನಗಳನ್ನು ಪರಿಶಿಷ್ಟ ಜಾತಿಯ ಶೇಕಡ ೨೫ರಷ್ಟು ಜನರಿಗೆ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಅವರು ಹೇಳಿದಹಾಗೆ ನಿವೇಶನದ ಪೂರ್ತಿ ಹಣ ಅವರು ಕೊಡದೇ ಇದ್ದರೂ ಅವರ ಸ್ವಾಧೀನಕ್ಕೆ ಕೊಟ್ಟು ಬೇರೆಯವರು ಅನಧಿಕೃತ ಕಟ್ಟಡವನ್ನು ಕಟ್ಟದೇ ಇರುವ ರೀತಿಯಲ್ಲಿ ಗೃಹಮಂಡಲಿಯು ಕಾನೂನಿನಲ್ಲಿ ಇದ್ದರೆ ಅದನ್ನು ಅಳವಡಿಸಬಹುದಾಗಿದೆ. ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೂಡಲೇ ನಿರ್ಧಾರವನ್ನು ತೆಗೆದುಕೊಂಡು ನನ್ನ ಇಲಾಖೆ ಬೇಡಿಕೆಗಳ ಚರ್ಚೆಗೆ ಬರುವ ಸಮಯದಲ್ಲೇ ಇದಕ್ಕೆ ಉತ್ತರ ಕೊಡಬಲ್ಲೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಪ್ರಕಾಶ್ ಅವರು ಸರಿಯಾದ ಉತ್ತರವನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಅವರು ಲಾಯರ್ ಎಂದು ಕಾಣುತ್ತದೆ. ಈಗ ನೀನೇ ಕಂತು ಕಟ್ಟಿದವರಿಗೆ ಸ್ವಾಧೀನ ಕೊಟ್ಟರೆ ಆತ ಮನೆಯನ್ನು ಕಟ್ಟುತ್ತಾನೆ. ಆತ ಮುಂದಿನ ಕಂತನ್ನು ಕಟ್ಟದೇ ಹೋದರೆ the whole property becomes the property of the BDA according to the Transfer of Property Act. ಆ ರೀತಿಯ ಭಯ ನಿಮಗೆ ಏಕೆ ? ಆರನೇ ಒಂದು ಭಾಗವನ್ನು ಪಡೆದು ನೀವು ನಿವೇಶನ ಕೊಡಿ, ಆದೇನೋ ಜನತಾ ಪಾರ್ಟಿಯವರಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದೀರಿ. ನ್ಯಾಯವಾಗಿ ಅವರಿಗೆ ಯಾವ ರೀತಿ ಸಹಾಯ ಮಾಡಬೇಕೋ ಅದನ್ನು ಮಾಡಿ ಸ್ವಾಮಿ. ಯಾರುಯಾರದೋ ಮಾತನ್ನು ಕೇಳಿಕೊಂಡು ಎಲ್ಲವನ್ನೂ ಕಟ್ಟಿದ ಮೇಲೆ ಸ್ವಾಧೀನ ಕೊಡುತ್ತೇವೆ ಎಂದು ಹೇಳಿದರೆ ಹೇಗೆ ಸ್ವಾಮಿ ?

ಬಿ. ಡಿ. ಎ.ನಲ್ಲಿ ಆಗುತ್ತಿರುವ ವ್ಯವಹಾರದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಇವತ್ತು ಸಬ್ಜೆಕ್ಟ್ ಇದೆ ನಾನು ಒಂದು ಸಲಹೆ ಕೊಡುತ್ತಿದ್ದೇನೆ. ತಾವು ಅದನ್ನು ಮಾಡಿ ಸೈಟುಗಳಿಗೆ ಕೊಡುವುದಕ್ಕೆ ಏನು ನೋಟಿಫಿಕೇಷನ್ ಮಾಡುತ್ತೀರಿ ಅದರಲ್ಲೇ ಎಲ್ಲಾ ಡೈಮೆನ್ಷನ್‌ಗಳಿಗೂ ವಿಸಾಲತೆಯನ್ನು ಪ್ರಕಟ ಮಾಡಿ. ಇವತ್ತಿನವರೆಗೆ ಪ್ರಕಟಣೆ ಮಾಡಿರುವುದರಲ್ಲಿ ಉದ್ದ, ಅಗಲ ಜಾಸ್ತಿ ಇರುವುದಿವೆ. ಎಷ್ಟು ಜನ ಅದನ್ನು ಕೊಂಡುಕೊಳ್ಳುತ್ತಾರೆ ? ಸಮ್ಮಲ್ಲಿ ಸ್ಥಿತಿವಂತರು ಯಾರೂ ಇಲ್ಲ. ಅವರು ಕೊಳ್ಳುವುದಕ್ಕೆ ಆಗುವುದಿಲ್ಲ ದಯವಾಡಿ ಇದನ್ನು ಬಿಡಿ. ಸ್ಥಿತಿವಂತರಾಗಿದ್ದಾರೆ, ಬಡವರು, ಪಾಪ ಎಂಬ ದೃಷ್ಟಿ ಬಿಟ್ಟು ಕಾನೂನು ಪ್ರಕಾರ ವಿಸ್ತಾರವನ್ನು ನೋಟಿಫಿಕೇಷನ್‌ನಲ್ಲಿ ಪ್ರಕಟಣೆ ಮಾಡಿ. ದಯವಾಡಿ ಏನು ಅಲಾಟ್‌ಮೆಂಟ್ ಆಗಬೇಕಾಗಿತ್ತೋ ಆ ಬ್ಯಾಕ್‌ಲಾಗ್ ಕೊಡುವುದಕ್ಕೆ ಪ್ರಯತ್ನ ಮಾಡಿ, ಆರನೇ ಒಂದು ಭಾಗ ಕೊಡುವುದಿದೆಯೆಲ್ಲ ಅದನ್ನು ಕೊಟ್ಟತಕ್ಷಣ ಭೂಮಿಯನ್ನು ಸ್ವಾಧೀನಕ್ಕೆ ಕೊಡಿ. ಅವರು ಮನೆ

ಕಟ್ಟಿಕೊಳ್ಳಲಿ. ಅವರು ಹಣ ಕಟ್ಟದೇ ಹೋದರೆ ಅವರ ಮನೆ ಕಿತ್ತುಕೊಳ್ಳಿ. ನನ್ನ ಅಭ್ಯಂತರ ಏನೂ ಇಲ್ಲ. ಎನ್.ಆರ್.ಐ. ಸ್ಕೀಮಿನಲ್ಲಿ ಸಾವಿರಾರು ಮನೆಗಳನ್ನು ಕಟ್ಟಿದ್ದೀರಿ. ನನ್ನ ಕ್ಷೇತ್ರವಾದ ನಾಗಶೆಟ್ಟಿಹಳ್ಳಿಯಲ್ಲೇ ಕಟ್ಟಿದ್ದೀರಿ. ನಾನ್‌ರೆಸಿಡೆಂಟ್ ಇಂಡಿಯನ್ಸ್‌ಗೆ ಕೊಡುವುದಕ್ಕೋಸ್ಕರ ಮಾಡಿದ್ದೀರಿ. ಅಲ್ಲಿರುವವರನ್ನು ಇಲ್ಲಿ ಬಂದು ಸಂಸಾರ ಮಾಡಿ ಎಂದು ಕರೆಯೋದೇ ? ಸಂಪಾದನೆ ಮಾಡಿ. ನನ್ನ ಅಭ್ಯಂತರ ಇಲ್ಲ. ಆದರೆ ಇಲ್ಲಿ ಏತಕ್ಕೆ ವಿಾಸಲಾತಿ ಇಡುವುದಿಲ್ಲ ? ದಯವಿಟ್ಟು ಇಲ್ಲಿಯೂ ವಿಾಸಲಾತಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಬಿ.ಡಿ.ಎ. ಸೈಟುಗಳನ್ನು ಮಾಡುತ್ತಾ ಇದ್ದೀರಿ, ಯಾರಿಗೋಸ್ಕರ ಮಾಡುತ್ತೀರಿ ? ಸಿಟಿಯಲ್ಲಿರತಕ್ಕ ಜನಗಳಿಗೋಸ್ಕರ ಮಾಡುತ್ತಿದ್ದೀರಿ. ಎಷ್ಟು ಜನ ಕನ್ನಡಿಗರಿದ್ದಾರೆ ಅವರಿಗೆ ಮಾತ್ರ ಮಾಡಿ. ನೀವು ಯಾರುಯಾರಿಗೋ ಕೊಡುವುದಕ್ಕೆ ವ್ಯವಹಾರಗಳು ಮಾಡಿಕೊಳ್ಳುತಾ ಹೋದರೆ ಎಲ್ಲಿಯವರೆಗೆ ಈ ರೀತಿ ಕೊಡುತ್ತೀರಿ? ಎಲ್ಲಿಗೆ ಸಿಟಿಯನ್ನು ವಿಂಡಿ ಮಾಡುತ್ತೀರಿ. ಈ ಎರಡಕ್ಕೂ ಉತ್ತರ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್,—ಪ್ರಾಯಃಶಃ ಹಿರಿಯ ಸದಸ್ಯರಾದ ಬಸವಲಿಂಗಪ್ಪನವರು ಇಡೀ ಬಿ.ಡಿ.ಎ. ವ್ಯವಹಾರಗಳನ್ನು ಚರ್ಚೆ ಮಾಡಬೇಕೆಂದು ಎನ್ನದ್ದರಾಗಿ ಬಂದಿದ್ದಾರೆಂದು ಕಾಣುತ್ತದೆ. ಆದರೆ ಅವರೇ ಇದನ್ನು ಮಾಡಿದಂಥ ಸಂದರ್ಭದಲ್ಲಿ ಆ ದಿವಸವೇ ಸ್ವಾಧೀನಕ್ಕೆ ಕೊಡಬೇಕು ಎಂಬುದನ್ನು ಯೋಚನೆ ಮಾಡಿರಲಿಲ್ಲ. ವ್ಯವಸ್ಥೆಯ ಕೈಕೂಸು ಅವರೂ ಆಗಿದ್ದರಿಂದ ಅವರು ಮಾಡಿದ ಆಚ್ಚಿಯಲ್ಲಿ ಆರು ವರ್ಷದ ಕಂತಿನ ಸವಲತ್ತು ಕೊಟ್ಟು ಆ ದಿವಸವೇ ಸ್ವಾಧೀನಕ್ಕೆ ಕೊಡಬೇಕು ಎಂಬುದನ್ನು ಸೇರಿಸಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾಡಿ. ನೀವು ಮಾಡಿ ಶಹಭಾಸ್‌ಗಿರಿ ತೆಗೆದುಕೊಳ್ಳಿ.

ಶ್ರೀ ಎಂ. ಪಿ ಪ್ರಕಾಶ್ —ಶಹಭಾಸ್‌ಗಿರಿ ಪ್ರಶ್ನೆಯಲ್ಲ. ವ್ಯವಸ್ಥೆಯ ಪ್ರಶ್ನೆ ಇಲ್ಲಿರುವುದು. ಮಾಡಬಾರದು ಎಂಬ ಮನೋಭೂಮಿಕೆ ನಮಗೆ ಇಲ್ಲ. ಅಥವಾ ಜನತಾ ಪಾರ್ಟಿ ಮಾಡಿದೆ ಎಂದು ಹೊಗಳಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಸಂವಿಧಾನಬದ್ಧವಾಗಿ ಇರತಕ್ಕ ಹಕ್ಕನ್ನು ರಕ್ಷಿಸಬೇಕಾದುದು ಎಲ್ಲರ ಕರ್ತವ್ಯ. ಮೂರು ವರ್ಷ ಎಂದು ಇರತಕ್ಕದ್ದು ಈ ದೃಷ್ಟಿಕೋನದಿಂದ ಮಾರ್ಪಾಡಾಗಿದೆ. ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಹೇಳಿದ ಸಲಹೆ ಮೇರೆಗೆ ಮತ್ತು ನಾವು ಹೇಳಿದಂತೆ ಪ್ರಥಮ ವರ್ಷದಲ್ಲೇ ಮೊದಲನೇ ಕಂತನ್ನು ಕಟ್ಟಿದ ಕೂಡಲೇ ಸ್ವಾಧೀನಕ್ಕೆ ಕೊಡುವ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಈ ದಿವಸ ಬೆಂಡಿಕೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಪ್ರಕಟಣೆ ಮಾಡುವವನಿದ್ದೇನೆ. ಪರಿಶಿಷ್ಟ ಜಾತಿ ಜನಾಂಗದವರು ಯಾರು ಯಾರು ಅರ್ಜಿ ಹಾಕಿದ್ದಾರೆ ಅವರಿಗೆ ಮೂರನೇ ಪ್ರಯತ್ನದಲ್ಲೇ ನಿವೇಶನ ಸಿಕ್ಕಿದೆ. ೫೦ × ೮೦ ಅಡಿ ನಿವೇಶನಕ್ಕೆ ಅರ್ಜಿ ಹಾಕಿರುವವರಿಗೆ ಮೂರನೇ ಪ್ರಯತ್ನದಲ್ಲಿ ಸಿಕ್ಕಿದೆ. ಆ ದೃಷ್ಟಿಕೋನದಿಂದ ೪,೭೦೦ ಜನಗಳಿಗೆ ನಿವೇಶನ ಕೊಟ್ಟಿದ್ದೇವೆ. ಆದರೆ ೬೦ × ೯೦ ಅಡಿ ನಿವೇಶನದಲ್ಲಿ ಕೇವಲ ಒಬ್ಬರಿಗೆ ಸಿಕ್ಕಿದೆ ಎಂದರೆ ಬಹಳ ಜನ ಪ್ರಯತ್ನ ಮಾಡಿಲ್ಲ ಎಂದು ಅರ್ಥ. ವಿಾಸಲಾತಿ ಮಾಡುವ ಬಗ್ಗೆ ಪರೀಕ್ಷೆ ಮಾಡುತ್ತೇನೆ. ಈಗಿರತಕ್ಕ ವ್ಯವಸ್ಥೆಯಲ್ಲಿ ಪರಿಶಿಷ್ಟ ಜನಾಂಗದವರು ಯಾರು ಈ ನಿವೇಶನಕ್ಕೆ ಅರ್ಜಿ ಹಾಕಿದ್ದಾರೆ ಅವರಿಗೆ ಮೂರನೇ ಬಾರಿಯ ಪ್ರಯತ್ನಕ್ಕೆ ಸಿಕ್ಕಿದೆ. ೬೦ × ೯೦ ಅಡಿ ನಿವೇಶನಕ್ಕೆ ಅಥವಾ ೮೦ × ೧೨೦ ಅಡಿ ನಿವೇಶನಕ್ಕೆ ಅರ್ಜಿ ಹಾಕಿದರೆ ಮೂರು ನಾಲ್ಕು ಪ್ರಯತ್ನದಲ್ಲಿ ಸಿಗತಕ್ಕ ಅವಕಾಶ ಇದೆ. ಆದರೂ ಪರಿಶೀಲನೆ ಮಾಡಿ ಉತ್ತರ ಕೊಡುತ್ತೇನೆ. ಎನ್‌ಆರ್‌ಐ ವಿಚಾರದಲ್ಲಿ ಅವರು ಪ್ರಸ್ತಾಪ ಮಾಡಿದರು. ಇಲ್ಲಿಯವರಿಗೂ ಕೂಡ ನಾವು ಅನಿವಾಸಿ ಭಾರತೀಯರಿಗಾಗಿ ಮನೆಗಳನ್ನು ಕಟ್ಟಿಸಿಲ್ಲ. ಮತ್ತು ಇಂಥ ಯೋಜನೆಗಳು ಕೂಡ ಇಲ್ಲ. ಅವರಿಗಾಗಿ ನಿವೇಶನಗಳನ್ನು ಕೊಡತಕ್ಕಂಥ ಒಂದು ಯೋಜನೆ ಇದೆ. ಅದರ ಬಗ್ಗೆ ನಾವು ಪ್ರತ್ಯೇಕವಾಗಿ ಪ್ರಶ್ನೆ ಹಾಕಿ.

ಶ್ರೀ ಬಿ. ಬಸವಲಿಂಗಪ್ಪ.—ಎನ್‌ಆರ್‌ಐ ಕೆಳಗೆ ನಾವು ಡಾಲರ್ ಸ್ಕೀಮ್‌ನ್ನು ನಾವು ಹೇಳುತ್ತಿರುವುದು. ಡಾಲರ್ ತೆಗೆದುಕೊಂಡು ಮನೆಗಳನ್ನು ಕಟ್ಟುವುದಲ್ಲ. ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರವಾಗಿ ಮಾಡಿ. ನಾವು ಕೂಡ ಅಪ್ಪೇ ದುಡ್ಡು ಕೊಡುತ್ತೇವೆ ನಮಗೂ ಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ಈಗ ನಾವು ಎನ್‌ಆರ್‌ಐ ಕೆಳಗೆ ಮನೆಗಳನ್ನು ಕಟ್ಟಿಲ್ಲ. ಅದರ ಬಗ್ಗೆ ಸಂಪೂರ್ಣವಾಗಿ ಭರವಸೆಯನ್ನು ಇಟ್ಟುಕೊಳ್ಳಬಹುದು. ಎನ್‌ಆರ್‌ಐ ನಲ್ಲಿ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಮನೆಗಳನ್ನು ಕಟ್ಟಿದ್ದೀರಿ ನಾಗಶೆಟ್ಟಿಹಳ್ಳಿಯಲ್ಲಿ ಕಟ್ಟಿದ್ದೀರಿ. ಹಾಗಾದರೆ ಕಟ್ಟಿರುವ ಮನೆಗಳನ್ನೆಲ್ಲ ನಮಗೆ ಕೊಟ್ಟುಬಿಡುತ್ತೀರಾ. ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಕಟ್ಟಿಸಿದ್ದೀರಿ. ನಾನು ಹೇಳುತ್ತಿದ್ದೇನೆ. ನೀವು ಇಲ್ಲವೆಂದು ಸುಳ್ಳು ಹೇಳುತ್ತೀರೆಲ್ಲ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಸೆಲ್ಫ್ ಫೈನಾನ್ಸಿಂಗ್ ಸ್ಕೀಮ್‌ನಲ್ಲಿ ಮಿಲ್‌ನವರಿಗೆ ಕೊಟ್ಟಿರುವುದು. ಅದರಲ್ಲಿ ರಿಸರ್ವೇಷನ್ ಇದೆ ನಿಮಗೂ ಕೊಡುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್. ದೊಮ್ಮಲೂರು ಲೇಔಟ್‌ನಲ್ಲಿ ಮತ್ತು ಬೇರೆ ಬೇರೆ ಕಡೆಗೆ ಈ ರೀತಿ ಯಾಗಿರತಕ್ಕಂಥ ಮನೆಗಳನ್ನು ಕಟ್ಟಿ ಅದರಲ್ಲೂ ಕೂಡ ಮೀಸಲಾತಿ ಕ್ರಮವನ್ನು ಅನುಸರಿಸುತ್ತಿದ್ದೇವೆ. ಇದು ಹೈಯರ್ ಇನ್‌ಕಮ್ ಗ್ರೂಪ್, ಹೆಚ್ಚು ಪರಮಾನ ಇರುವವರಿಗೆ ಕಟ್ಟಿಸುವ ಮನೆಗಳೇ ವಿನಹ ಎನ್‌ಆರ್‌ಐ ಕೆಳಗೆ ಮನೆಗಳನ್ನು ಕಟ್ಟಿಸಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಹೈಯರ್ ಇನ್‌ಕಮ್ ಗ್ರೂಪ್ ಎಂದು ಇಟ್ಟುಕೊಳ್ಳಿ. ಮಿಡಲ್ ಇನ್‌ಕಮ್ ಗ್ರೂಪ್ ಎಂದೇ ಇಟ್ಟುಕೊಳ್ಳಿ, ಅದರಲ್ಲಿ ಪೆಡ್ಡೊಲ್ ಕ್ಯಾಸ್ಟ್‌ಗೆ ರಿಸರ್ವೇಷನ್ ಮಾಡಿ. ಅವರು ಅರ್ಜಿಯನ್ನು ಕೊಡದಿದ್ದರೆ ಯಾರಿಗಾದರೂ ಕೊಟ್ಟುಕೊಳ್ಳಿ. ನೀವು ಏತಕ್ಕೆ ರಿಸರ್ವೇಷನ್ ಮಾಡುವುದಿಲ್ಲ ?

ಶ್ರೀ ಎಂ. ಪಿ. ಪ್ರಕಾಶ್.—ಈಗ ಕಟ್ಟಿಸಿರತಕ್ಕಂಥ ಯೋಜನೆಯ ಕೆಳಗೆ ಯಾರು ತಮ್ಮ ಹಣವನ್ನು ಕೊಡುತ್ತಾರೊ ಸೆಲ್ಫ್ ಫೈನಾನ್ಸ್ ಸ್ಕೀಮ್ ಎಂದು ನಮ್ಮ ಬಿಡಿಎ ವತಿಯಿಂದ ಕಟ್ಟತಕ್ಕಂಥ ಮನೆಗಳು ಅದರಲ್ಲಿ ವಿಶೇಷವಾತಿ ಪ್ರಶ್ನೆ ಬರುವುದಿಲ್ಲ. ಯಾರು ಯಾರು ಹಣವನ್ನು ಕೊಡುತ್ತಾರೋ ಅವರೆಲ್ಲರಿಗೂ ಕೊಡಲಾಗುತ್ತದೆ. ಉದಾಹರಣೆಗೆ ರಾಜಮಹಲ್ ಸೆಕೆಂಡ್ ಸ್ಟೇಜ್‌ನಲ್ಲಿ, ೧೫ ಜಿ ಎಂ. ನಂದಿನಿ ಲೇಔಟ್‌ಗಳಲ್ಲಿ ಯಾರು ಯಾರು ದುಡ್ಡು ಕೊಟ್ಟಿದ್ದಾರೆ ಅವರಿಗೆ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ಅವರು ಹೇಳಿದ ಹಾಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಅದರ ಮೂಲಕ ಮಾಡತಕ್ಕಂಥ ಒಂದು ಸ್ಕೀಮ್ ಇದೆ, ಹೌಡಿಂಗ್‌ರವರು ಸುಮಾರು ೮೦ರಷ್ಟು ಹಣವನ್ನು ಕೊಡಲಿಕ್ಕೆ ತಯಾರಾಗಿದ್ದಾರೆ. ಅವರು ಸೀಡ್‌ಮನಿ ೨೦ ಪರ್ಸೆಂಟ್ ಕೊಡಬೇಕು, ೨೦ ಪರ್ಸೆಂಟ್ ಸೀಡ್‌ಮನಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು ಮತ್ತು ದುರ್ಬಲ ವರ್ಗದವರು ಕೊಡಬೇಕೆಂಬ ನಿಯಮಾವಳಿಯನ್ನು ರೂಪಿಸುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಕೇಳುತ್ತಿರುವುದು ಹೈಯರ್ ಗ್ರೂಪ್ ಇನ್‌ಕಮ್ ಮನೆಗಳನ್ನು ಕಟ್ಟಿಸುತ್ತಿದ್ದೀರಲ್ಲ ಅದರಲ್ಲಿ ಯಾರು ಯಾರು ದುಡ್ಡು ಕೊಡುತ್ತಾರೆ ಅವರಿಗೆ ಕೊಡುತ್ತೇವೆಂದು ಹೇಳುತ್ತೀರಿ, ಅವರೆ ಇನ್ನೂರು ಮನೆಗಳನ್ನು ಕಟ್ಟಿಸಬೇಕೆಂದು ಏನು ಯೋಜನೆ ಇರುತ್ತದೆ ಅದರಂತೆ ಕಟ್ಟಿಸಿ ಅಲಾಟ್‌ಮೆಂಟ್ ಮಾಡುವಾಗ ೧೫ ಪರ್ಸೆಂಟ್ ರಿಸರ್ವೇಷನ್ ಇಟ್ಟರೆ ಯಾರು ಬೇಕಾದರೂ ದುಡ್ಡನ್ನು ತುಂಬುತ್ತಾರೆ. ಅವರು ಬರದಿದ್ದರೆ ಬೇರೆಯವರಿಗೆ ಅಲಾಟ್ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಅವರು ಹೇಳುತ್ತಿರುವುದು ಸೂಕ್ತವಾದ ಸಲಹೆಯಾಗಿರುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ

೧೨೬೬. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್), ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ, ಭರವಸೆ ಯೋಜನೆ ಬರಗಾಲ ಪೀಡಿತ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರೇ ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಇಲ್ಲಿಯವರೆಗೆ